**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 28-03-2019 ರಂದು ಅಪರಾಹ್ನ 12:30 ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
4. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
5. ಡಾ॥ ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ.
7. ಶ್ರೀ ಚಂದ್ರಕಾಂತ್ ಭಜಂತ್ರಿ, ಅಧೀನ ಕಾರ್ಯದರ್ಶಿ.

ಆಯೋಗದ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ಮತ್ತು ಇತರ ಮಾಹಿತಿ ಆಯುಕ್ತರನ್ನು ಸ್ವಾಗತಿಸುತ್ತಾ, ಇಂದಿನ ಅಜೆಂಡಾದ ಕುರಿತು ಸಭೆ ನಡೆಸಲು ಮಾನ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಕೋರಿದರು.

**ಸಭೆಯಲ್ಲಿ ಚರ್ಚಿಸಲಾದ ವಿಷಯ:**

**ಕಲಬುರಗಿ ಮತ್ತು ಬೆಳಗಾವಿಯಲ್ಲಿ ಕರ್ನಾಟಕ ಮಾಹಿತಿ ಆಯೋಗದ ಪೀಠಗಳನ್ನು ಸ್ಥಾಪಿಸಲು ಸ್ಥಳವನ್ನು ಪಡೆಯುವ ಬಗ್ಗೆ.**

ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಿ/75/ಯೋಪರ/2018, ದಿನಾಂಕ: 10-01-2019 ರನ್ವಯ ಬೆಳಗಾವಿ ಪ್ರಾದೇಶಿಕ ಆಯುಕ್ತರು ಗುರುತಿಸಿದ್ದ, ಜಿಲ್ಲಾ ಪಂಚಾಯಿತಿಯ ಕಟ್ಟಡವನ್ನು ಡಿ.ಡಿ.ಎಲ್.ಆರ್., ಭೂ ದಾಖಲೆಗಳ ಇಲಾಖೆ, ಬೆಳಗಾವಿರವರು ಸೋಮವಾರ ಮತ್ತು ಬುಧವಾರ ನ್ಯಾಯಾಲಯ ಪ್ರಕರಣ ನಡೆಸಲು ಉಪಯೋಗಿಸುತ್ತಿದ್ದು, ಮಾಹಿತಿ ಆಯೋಗದ ಪೀಠಕ್ಕೆ ತಾತ್ಕಾಲಿಕವಾಗಿ ಸ್ಥಳಾವಕಾಶ ಕಲ್ಪಿಸಬಹುದಾಗಿದೆ ಎಂದು ಪ್ರಾದೇಶಿಕ ಆಯುಕ್ತರು ಬೆಳಗಾವಿ ರವರು ಸರ್ಕಾರಕ್ಕೆ ವರದಿ ಸಲ್ಲಿಸಿದ ಹಿನ್ನಲೆಯಲ್ಲಿ ಸದರಿ ಕಟ್ಟಡವು ಸೂಕ್ತವಲ್ಲವೆಂದು ಈ ಹಿಂದೆ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಗಿದೆ.

ಕಲಬುರಗಿ ಜಿಲ್ಲೆಯಲ್ಲಿ ಪೀಠ ಸ್ಥಾಪನೆ ಸಂಬಂಧ ಪ್ರಾದೇಶಿಕ ಆಯುಕ್ತರು ಗುರುತಿಸಿದ್ದ ಸರ್ಕಾರಿ ಕಟ್ಟಡವು ಗುಣಮಟ್ಟದಲ್ಲಿ ಕಳಪೆಯಾಗಿರುವುದರಿಂದ ಮತ್ತು ಆಯೋಗದ ಪೀಠ ಸ್ಥಾಪನೆಗೆ ಅಗತ್ಯವುಳ್ಳ ವಿಸ್ತೀರ್ಣ ಹೊಂದಿಲ್ಲದ ಹಿನ್ನಲೆಯಲ್ಲಿ ಸೂಕ್ತವಾಗಿಲ್ಲವೆಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಗಿದೆ.

ಸದರಿ ಕಟ್ಟಡಗಳ ಬದಲಿಗೆ ಕೂಡಲೇ ಸೂಕ್ತವಾದ ಖಾಸಗಿ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವಂತೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ) ರವರು ದಿನಾಂಕ: 19-03-2019ರಂದು ತಿಳಿಸಿದ ಹಿನ್ನಲೆಯಲ್ಲಿ ಖಾಸಗಿ ಕಟ್ಟಡಗಳನ್ನು ಗುರುತಿಸಿ ಅಗತ್ಯವುಳ್ಳ ಮಾರ್ಪಾಡಿಗೆ ದರಪಟ್ಟಿಯೊಂದಿಗೆ ವರದಿ ಸಲ್ಲಿಸಲು ಬೆಳಗಾವಿಯ ಕಾರ್ಯಪಾಲಕ

ಅಭಿಯಂತರರಿಗೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರು ದಿನಾಂಕ: 25-03-2019ರಂದು ಸೂಚಿಸಿರುತ್ತಾರೆ.

ಆದರೆ, ದಿನಾಂಕ: 23-03-2019ರ ಪತ್ರದಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿರವರು ಕಲಬುರಗಿಯ ವಸತಿ ಗೃಹ ಸಂಖ್ಯೆ: 109/ಡಿ ಐವಾನ ಇ ಷಾಹಿ ಕಾಲೋನಿ ಹಾಗೂ ಬೆಳಗಾವಿಯ ಹಳೆ ಜಿಲ್ಲಾ ಪಂಚಾಯಿತಿ ಕಟ್ಟಡದ ನೆಲಮಹಡಿ ಆಯೋಗದ ಪೀಠ ಸ್ಥಾಪನೆಗೆ ಸೂಕ್ತವಿದ್ದು, ತುರ್ತಾಗಿ ವಶಕ್ಕೆ ಪಡೆದು ಏನಾದರೂ ರಿಪೇರಿ ಇತ್ಯಾದಿ ಅವಶ್ಯವಿದ್ದಲ್ಲಿ ಸ್ಥಳೀಯ ಅಧಿಕಾರಿಗಳ ಸಮಾಲೋಚನೆಯೊಡನೆ ಮಾಡಿಸಬೇಕೆಂದು ತೀರ್ಮಾನಿಸಲಾಗಿದೆ ಎಂದು ತಿಳಿಸಿ ತುರ್ತಾಗಿ ಕ್ರಮಕೈಗೊಂಡು ವರದಿ ನೀಡಲು ತಿಳಿಸಲಾಗಿದೆ.

ಬೆಳಗಾವಿಯ ಹಳೆ ಜಿಲ್ಲಾ ಪಂಚಾಯಿತಿ ಕಟ್ಟಡವನ್ನು ಪೂರ್ಣವಾಗಿ ಮಾಹಿತಿ ಆಯೋಗಕ್ಕೆ ಒದಗಿಸುವ ಬಗ್ಗೆ ಪ್ರಸ್ತಾವನೆ ಇಲ್ಲದ ಕಾರಣ ಹಾಗೂ ಕಲಬುರಗಿಯಲ್ಲಿ ಗುರುತಿಸಿರುವ ವಸತಿ ಗೃಹವು ಆಯೋಗದ ಅಗತ್ಯತೆಗೆ ಅನುಗುಣವಾಗಿರದ ಹಿನ್ನಲೆಯಲ್ಲಿ ಕ್ರಮವಹಿಸುವ ಬಗ್ಗೆ ಮಾರ್ಗದರ್ಶನ ಕೋರಿ ದಿನಾಂಕ: 26-03-2019ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲಾಗಿ ದಿನಾಂಕ: 27-03-2019ರ ಪತ್ರದಲ್ಲಿ ಈಗಾಗಲೇ ಪ್ರಾದೇಶಿಕ ಆಯುಕ್ತರುಗಳು ಗುರುತಿಸಲಾದ ಸರ್ಕಾರಿ ಕಟ್ಟಡಗಳು ಕರ್ನಾಟಕ ಮಾಹಿತಿ ಆಯೋಗದ ಪೀಠಗಳ ಕಾರ್ಯನಿರ್ವಹಣೆಗೆ ಸೂಕ್ತವಾಗಿದೆ ಎಂಬ ತೀರ್ಮಾನವನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆದೇಶದಂತೆ ಕೈಗೊಳ್ಳಲಾಗಿದೆ. ಆದ್ದರಿಂದ ಯಾವುದೇ ವಿಳಂಭಕ್ಕೆ ಆಸ್ಪದ ಕೊಡದೆ ತುರ್ತಾಗಿ ಕ್ರಮವಹಿಸಲು ತಿಳಿಸಿರುವುದನ್ನು ಇಂದಿನ ಸಭೆಯಲ್ಲಿ ಮಾನ್ಯ ಆಯುಕ್ತರುಗಳ ಗಮನಕ್ಕೆ ಕಾರ್ಯದರ್ಶಿಯವರು ತಂದಿದ್ದು, ಮಾನ್ಯ ಆಯುಕ್ತರುಗಳು ಮಾಹಿತಿ ಆಯೋಗದ ಪೀಠ ಕಾರ್ಯನಿರ್ವಹಿಸಲು ಅಗತ್ಯ ವಿಸ್ತೀರ್ಣದ ಮತ್ತು ಮೂಲ ಸೌಕರ್ಯಗಳುಳ್ಳ ಕಟ್ಟಡ ಅಗತ್ಯವಿದ್ದು, ಅದನ್ನು ಸರ್ಕಾರ ಒದಗಿಸಿದಲ್ಲಿ ಕಾರ್ಯನಿರ್ವಹಿಸಲು ಸಿದ್ಧವೆಂದು ಸರ್ವಾನುಮತದಿಂದ ತಿಳಿಸಿರುತ್ತಾರೆ.

ಸಭೆಗೆ ಹಾಜರಾಗಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

28/3/2019

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ), ಬೆಂಗಳೂರು ರವರ ಮಾಹಿತಿ ಮತ್ತು ಅವಗಾಹನೆಗಾಗಿ,
2) ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಪ್ತ ಶಾಖೆಗೆ.
3) ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳ ಆಪ್ತ ಶಾಖೆಗೆ, ನ್ಯಾ.ಸ-02 ರಿಂದ ನ್ಯಾ.ಸ-08 ರವರೆಗೆ.
4) ಕಛೇರಿ ಪ್ರತಿ.